ಓ.ಎಸ್.ನಂಃ 142/2018 ಪಿಡಬ್ಲ್ಯೂಃ 1

ಸಾಕ್ಷಿದಾರನನ್ನು ಕರೆಸಿ ಪ್ರಮಾಣೀಕರಿಸಲಾಯಿತು. ಪ್ರ.ಮಾ.ದಿಃ 06.03.2023.

**ಪಾಟೀ ಸವಾಲು – ಪ್ರತಿವಾದಿ ಪರ ಶ್ರೀ . ಪಿ.ಸಿ.ಎಸ್. ವಕೀಲರಿಂದ.**

1) ಈ ದಾವೆಯನ್ನು ಬರೆಯಲು ನಾನೇ ಮಾಹಿತಿ ಕೊಟ್ಟಿರುತ್ತೇನೆ. ನಾವು ಓಡಾಡುವ ದಾರಿಯು ದಾವಾ ಆಸ್ತಿ ಇರುತ್ತದೆ. ನನ್ನ ಜಮೀನಿನ ರಿ.ಸ.ನಂಃ 74 ಇರುತ್ತದೆ. ನಾನು ಶಾಲೆ ಕಲಿಯದೇ ಇದ್ದುದರಿಂದ ನನಗೆ ಸರ್ವೆ ನಂ ಇತ್ಯಾದಿ ವಿವರಗಳನ್ನು ಹೇಳಲು ಬರುವುದಿಲ್ಲ. ನಮ್ಮ ಜಮೀನಿನ ಹಿಸ್ಸಾ ನಂಬರ ಗೊತ್ತಿರುವುದಿಲ್ಲ. ಸರ್ವೇ ನಂ.74 ಮೂಲತಃ ದೊಡ್ಡ ಜಮಾಲಸಾಬ್ ಇಮಾಮ್ ಸಾಬ್ ಇವರಿಗೆ ಸೇರಿದ್ದು ಇರುತ್ತದೆ. ಸದರಿ ದೊಡ್ಡ ಜಮಾಲಸಾಬ್ ಇಮಾಮ್ ಸಾಬ್ ಇವರು ಸದರಿ ಆಸ್ತಿಯನ್ನು ಮೂಲತಃ ಖರೀದಿಗೆ ಹಿಡಿದಿರುತ್ತಾರೆ.

2) ಯಾರಿಂದ ಮತ್ತು ಎಷ್ಟು ವಿಸ್ತೀರ್ಣವನ್ನು ರಿ.ಸ 74 ರಲ್ಲಿ ಸದರಿ ಇಮಾಮ್ ಸಾಬ್ ಜಮಾಲ್ ಸಾಬ್ ಇವರು ಖರೀದಿ ಹಿಡಿದಿರುತ್ತಾರೆ ಎಂಬುದು ನನಗೆ ಗೊತ್ತಿರುವುದಿಲ್ಲ. ರಿ.ಸ ನಂ.74 ಮೂಲತಃ ಒಟ್ಟು 13 ವರೆ ಎಕರೆ ವಿಸ್ತೀರ್ಣವನ್ನು ಹೊಂದಿತ್ತು. ಸದರಿ ರಿ.ಸ ನಂ. ಯಾವಾಗ ಮತ್ತು ಒಟ್ಟು ಎಷ್ಟು ಹಿಸ್ಸೆಗಳಾಗಿ ಪೋಡಿಯಾಗಿರುತ್ತದೆ ಎಂಬುದು ನನಗೆ ಗೊತ್ತಿರುವುದಿಲ್ಲ. ಸದರಿ ಜಮಾಲ್ ಸಾಬ್ ಮಕ್ಕಳ ನಡುವಿನಲ್ಲಿ ಎರಡು ಹಿಸ್ಸೆಗಳಾಗಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

ಮುಂದುವರೆದ ಪಾಟೀ ಸವಾಲು ಮುಂದೂಡಲಾಗಿದೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ.

ಸಹಿ/-

ದಿವಾಣಿ ನ್ಯಾಯಾಧೀಶರು,

ಬ್ಯಾಡಗಿ.